**ಸಾಕ್ಷಿಗೆ ದಿನಾಂಕಃ19-08-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಪಾಟೀ ಸವಾಲು :: ಪ್ರತಿವಾದಿಗಳ ಪರ ಶ್ರೀ. BPR ವಕೀಲರಿಂದ ::**

ಕೆ ಸಿ ನಾಗರಾಜಪ್ಪ ನವರಿಗೆ ಕೆ ಇ ಹಾಲಪ್ಪ ಮತ್ತು ಅವರ ಹೆಂಡತಿಗೆ ಒಂದು ಎಕರೆ 6 ಮುಕ್ಕಾಲು ಗುಂಟೆ ಜಾಗವನ್ನು ಮಾರಾಟ ಮಾಡಲು ಅಧಿಕಾರ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅವರಿಗೆ ಕೇವಲ 1 ಎಕರೆ ಮುಕ್ಕಾಲು ಗುಂಟೆ ಮಾತ್ರ ಮಾರಾಟ ಮಾಡಲು ಅಧಿಕಾರ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಮಾರಾಟದ ಪೂರ್ವದಲ್ಲಿ ಮಾಡಿರುವ 11 ಇ ಸ್ಕೆಚ್ ಸಹ ತಪ್ಪು ದುರಸ್ತಿಯ ಆಧಾರದಲ್ಲಿ ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸತೀಶ ರವರು DDLR ರವರಿಗೆ ಸಲ್ಲಿಸಿದ ಅಪೀಲ್ ಆದೇಶದ ವಿರುದ್ದ ನಾನು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. DDLR ರವರ ಆದೇಶದಂದತೆ ADLR ರವರು ಕ್ರಯಪತ್ರಗಳು ಹಾಗೂ ಹಿಡುವಳಿದಾರರ ಸ್ವಾಧೀನದ ಅನ್ವಯ ಸರ್ವೇ ಮಾಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಪ್ರತಿವಾದಿಗಳು ಅವರು ಕ್ರಯಪತ್ರದ ಅಡಿಯಲ್ಲಿ ಹಾಗೂ ಅದರಲ್ಲಿ ಕಾಣಿಸಿರುವ ಚೆಕ್ಕುಬಂದಿ ಆಧಾರದಲ್ಲಿ ಸದರಿ ಜಾಗದ ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ. ರುದ್ರಪ್ಪ ರವರಿಂದ ಕೆ ಆರ್ ಹಾಲಪ್ಪ ರವರು 1980 ರಲ್ಲಿ 5 ಗುಂಟೆ ಜಾಗವನ್ನು ಎಸ್ ಆರ್ ನಂಬರ್ 1563/1979-80 ರಂತೆ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಾಗದ ಚೆಕ್ಕುಬಂದಿ ಪೂರ್ವಕ್ಕೆ ಅವರ ಉಳಿಕೆ ಜಮೀನು, ಪಶ್ಚಿಮಕ್ಕೆ ಕೊರಟಿಕೆರೆ ರಸ್ತೆ ಮತ್ತು ಈ ರಸ್ತೆಯಲ್ಲಿ ಬಿಟ್ಟಿರುವ 3 ಅಡಿ ಜಾಗ, ಉತ್ತರಕ್ಕೆ ಎಂ ಮರುಳಸಿದ್ದಪ್ಪ ರವರ ಜಾಗ ಮತ್ತು ದಕ್ಷಿಣಕ್ಕೆ ಈಶ್ವರಪ್ಪ ರವರ ಹಿಸ್ಸೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಕೆ ಆರ್ ಹಾಲಪ್ಪ ರವರು ಈಶ್ವರಪ್ಪ ರವರಿಂದ 27.03.1991 ರಂದು ಎಸ್ ಆರ್ ನಂಬರ್ 1484/1990-91 ರಂತೆ 3 ಗುಂಟೆ ಜಾಗವನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಜಾಗದ ಚೆಕ್ಕುಬಂದಿ ಪೂರ್ವಕ್ಕೆ ಕೆ ಎನ್ ಮಹೇಂದ್ರ, ಪಶ್ಚಿಮಕ್ಕೆ ಕೊರಟಿಕೆರೆ ಗ್ರಾಮಕ್ಕೆ ಹೋಗುವ ರಸ್ತೆ, ದಕ್ಷಿಣಕ್ಕೆ ಸಿ ಹಾಲಪ್ಪ ಹಾಗೂ ಕೆ ಎಂ ಚಂದ್ರಪ್ಪ ರವರ ಜಮೀನು ಮತ್ತು ಉತ್ತರಕ್ಕೆ ಸರ್ವೇ ನಂಬರ್ 119 ರ ಬಾಬ್ತು 5 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಕೆ ಆರ್ ಹಾಲಪ್ಪ ರವರು 22.01.1999 ರಂದು

ಎಸ್ ಆರ್ 2396/1998-99 ರಂತೆ 5 ಗುಂಟೆ ಜಾಗವನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಜಾಗದ ಚೆಕ್ಕುಬಂದಿ ಪೂರ್ವಕ್ಕೆ ಟಿ ಬಸಪ್ಪ ರವರ ಜಮೀನು, ಪಶ್ಚಿಮಕ್ಕೆ ಕುಡ್ಲೂರು ಗ್ರಾಮಂದಿಂದ ಕೊರಟಿಕೆರೆ ಗ್ರಾಮಕ್ಕೆ ಹೋಗುವ ರಸ್ತೆ, ಉತ್ತರಕ್ಕೆ ಷಡಾಕ್ಷರಪ್ಪ ರವರ ಸ್ವತ್ತು ಮತ್ತು ದಕ್ಷಿಣಕ್ಕೆ ಕ್ರಯದಾರರಾದ ನನ್ನ ಸ್ವಂತ ಜಮೀನು ಇರುತ್ತದೆ ಎಂದರೆ ಸರಿ. ಸಿ ಹಾಲಪ್ಪ ರವರು ಈಶ್ವರಪ್ಪ ರವರಿಂದ 5 ಗುಂಟೆ ಜಾಗವನ್ನು ದಿಃ 27.03.1991 ರಂದು ಎಸ್ ಆರ್ 1483/1990-91 ರಂತೆ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಜಾಗದ ಚೆಕ್ಕುಬಂದಿ ಪೂರ್ವಕ್ಕೆ ಕೆ ಎಂ ಚಂದ್ರಪ್ಪ ರವರ ಜಮೀನು, ಪಶ್ಚಿಮಕ್ಕೆ ಕೆ ಎಂ ಚಂದ್ರಪ್ಪ ರವರ ಜಮೀನು, ದಕ್ಷಿಣಕ್ಕೆ ಗಂಗಾಧರಪ್ಪ ರವರ ಜಮೀನು ಮತ್ತು ಉತ್ತರಕ್ಕೆ ಇದೇ ನಂಬರ್ ನಲ್ಲಿ ಕೆ ಆರ್ ಹಾಲಪ್ಪ ರವರ ಜಮೀನು ಎಂದರೆ ಸರಿ. ಸದರಿ ಜಾಗಕ್ಕೆ ಸಂಬಂಧಪಟ್ಟಂತೆ ಎಂ ಆರ್ 54/1990-91 ರಂತೆ ಸಿ ಹಾಲಪ್ಪ ರವರಿಗೆ ಹಕ್ಕು ಬದಲಾವಣೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆದರೆ ಸದರಿ ಎಂ ಆರ್ ನಂತೆ ಪಹಣಿ ಅವರ ಹೆಸರಿಗೆ ನಮೂದಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯವನ್ನು ದುರುಪಯೋಗಪಡಿಸಿಕೊಂಡು ಪ್ರತಿವಾದಿಗಳು ನನ್ನ ಜಾಗವನ್ನು ಒತ್ತುವರಿ ಮಾಡಿರುವುದಾಗಿ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಎಂ ಆರ್ 54/1990-91 ರಂತೆ ಖಾತೆ ಬದಲಾವಣೆ ಆಗದ ಕಾರಣ 2, 3, 5 ಮತ್ತು 5 ನೇ ಪ್ರತಿವಾದಿಗಳು ಕಂದಾಯ ಅಪೀಲು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣವು ಈ ದಾವೆ ಹೂಡುವ ಸಮಯದಲ್ಲಿ ಚಾಲ್ತಿಯಲ್ಲಿ ಇತ್ತು ಎಂದರೆ ಸರಿ.

ದಿಃ 27.03.1991 ಎಸ್ ಆರ್ ನಂಬರ್ 1482 ರಂತೆ 5 ಗುಂಟೆ ಜಮೀನು ಅನ್ನು ಈಶ್ವರಪ್ಪ ರವರಿಂದ ಕೆ ಎಂ ಚಂದ್ರಪ್ಪ ರವರು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಾಗದ ಚೆಕ್ಕುಬಂದಿ ಪೂರ್ವಕ್ಕೆ ಕೆ ಎಂ ಮಹೇಂದ್ರ ರವರ ಜಮೀನು, ಪಶ್ಚಿಮಕ್ಕೆ ಈ ದಿವಸ ಕ್ರಯಕ್ಕೆ ಪಡೆದಿರುವ 5 ಗುಂಟೆ ಜಮೀನು, ದಕ್ಷಿಣಕ್ಕೆ ಗಂಗಾಧರಪ್ಪ ರವರ ಜಮೀನು ಮತ್ತು ಉತ್ತರಕ್ಕೆ ಕೆ ಆರ್ ಹಾಲಪ್ಪ ರವರ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿಗಳು ನನಗೆ ಸೇರಿದ ಯಾವುದೇ ಆಸ್ತಿಯನ್ನು ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂಬರ್ 119 ದುರಸ್ತಿಯಾಗಾದ ಕಾರಣ ಈ ದಾವೆಯು ಕಾನೂನಿನ ಅಡಿಯಲ್ಲಿ ನಿಲ್ಲತಕ್ಕದ್ದಲ್ಲ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ

ತರೀಕೆರೆ.

ಸಾಕ್ಷಿಯ ಸಹಿ: